ಭಟ್ಟರಿಂದ ಹೊಸದಾಗಿ ಸಿಂಗಾರ ಮಾಡಿಸಿಕೊಳ್ಳುತ್ತಿದ್ದಳು. ಸದ್ದಾಗದಂತೆ ಎಚ್ಚರ ವಹಿಸಿ ಅವಳ ಬಳಿಯಲ್ಲಿ ಹೋಗಿ ಆಸೀನನಾದ.

ಅಷ್ಟರಲ್ಲಿ ದೇವಸ್ಥಾನದ ಎದುರು ಒಂದು ಕಾರು ಬಂದು ನಿಂತಿತು. ಜರತಾರಿ ಸೀರೆಯುಟ್ಟು ಕಾರಿಳಿದು ಬಂದ ಕೃಷ್ಣಸೆಟ್ಟಿಯವರ ಸೊಸೆ ಕೈಯಲ್ಲಿ ಹಾಲು, ಹೂ, ಹಣ್ಣು, ಕರ್ಪೂರ, ಅಗರಬತ್ತಿ ಇವನ್ನೆಲ್ಲ ತಟ್ಟೆಯಲ್ಲಿ ಹೊತ್ತು ಒಳಕ್ಕೆ ಬಂದಳು. ಕೃಷ್ಣಸೆಟ್ಟಿಯವರ ಮಗ ಫೋನಿನಲ್ಲಿ ಯಾರಿಗೋ 'ಪೊಲೀಸರನ್ನು ಅಡ್ಜಸ್ಟ್ ಮಾಡಿಕೋ, ಪೋಸ್ಟ್ ಮಾರ್ಟಮ್ ರಿಪೋರ್ಟ್ ಸರಿಯಾಗಿ ಮಾಡಿಸು... ಒಂದೊಂದು ಕಣ್ಣಿಗೂ ಆರು ಲಕ್ಷ ಹೇಳು' ಅನ್ನುತ್ತ ಆದೇಶ ನೀಡುತ್ತಾ ನಡೆದು ಬರುತ್ತಿದ್ದ. ದಂಪತಿ ಒಳಕ್ಕೆ ಬರುತ್ತಿದ್ದಂತೆ ವಿಷ್ಣು ಕೆರಳಿ ಲಕ್ಷ್ಮಿಯನ್ನು ಪೀಠದಿಂದೆಬ್ಬಿಸಿ ವೈಕುಂಠಕ್ಕೆ ನಡೆದುಬಿಡಲೋ ಇಲ್ಲವೇ ಕಲ್ಕಿಯಾಗಿ ಈಗಲೇ ಇಲ್ಲಿಯೇ ಅವತಾರವನ್ನೆತ್ತಿ ದುಷ್ಟಶಿಕ್ಷಣ ಕಾರ್ಯ ಇಲ್ಲಿಂದಲೇ ಆರಂಭಿಸಿ ಬಿಡಲೋ ಅನ್ನುವ ದುವಿಧಕ್ಕೆ ಸಿಲುಕಿ ಕೋಪದಿಂದ ಒದ್ದಾಡುತ್ತಿದ್ದ...

ಪೂಜೆಯ ಭಟ್ಟರು ಜೋಡಿಸಿಟ್ಟ ವಿವಿಧ ಆರತಿ ತಟ್ಟೆಗಳಲ್ಲಿ ದೀಪ ಬೆಳಗಿ ಮಂಗಳಾರತಿಗೆ ಸಿದ್ಧರಾಗುತ್ತಿದ್ದರು. ತಮಗೆ ಸಲ್ಲುತ್ತಿದ್ದ ಪೂಜೆ ಪುನಸ್ಕಾರಗಳಿಗೆ ಪ್ರಸನ್ನಳಾಗಿ ಬೀಗುತ್ತಿದ್ದಂತೆ ಕಂಡು ಬಂದ ಲಕ್ಷ್ಮೀದೇವಿ ನಡುವೆ ಒಮ್ಮೆ ವಿಷ್ಣುವಿನ ಕಣ್ಣು ಕೆಂಪಾಗಿದ್ದುದನ್ನು ಗಮನಿಸಿದಳು. ದಿವ್ಯದೃಷ್ಟಿ ಬಳಸಿ ರಮಣನ ಕೋಪಕ್ಕೆ ಕಾರಣ ತಿಳಿದುಕೊಳ್ಳುವ ಬದಲು ಲಕ್ಷ್ಮಿ ಇದು ತಾನು ಬೆಳಗ್ಗೆ ಬೇಗ ಏಳದೇ ಇದ್ದುದಕ್ಕೆ ಇನ್ನೂ ಶಮನವಾಗದ ಕೋಪ ಎಂದೇ ಭ್ರಮಿಸಿ ರಮಣನ ಕೈ ಹಿಡಿದು ಪೀಠದಲ್ಲಿ ಇನ್ನೂ ಹತ್ತಿರಕ್ಕೆ ಸರಿದು ಕೂತು 'ರಾಜೀವಲೋಚನನ ಕಣ್ಣುಗಳೇಕೆ ಇಷ್ಟು ಕೆಂಪಾಗಿವೆ?' ಅಂತ ರಮಿಸಿ ಪ್ರಶ್ನಿಸಿದಳು.

ಕೃಷ್ಣಸೆಟ್ಟಿಯವರ ಮನೆಯವರು ಬರುವುದನ್ನು ನೋಡುತ್ತಲೇ ಚುರುಕಾದ ದೇವಸ್ಥಾನದ ಸಿಬ್ಬಂದಿ ಮತ್ತು ನೆರೆದಿದ್ದ ಭಕ್ತರು ಘಂಟೆ, ಜಾಗಟೆ, ನಗಾರಿ ಇತ್ಯಾದಿ ವಾದ್ಯಘೋಷಗಳನ್ನು ಆರಂಭಿಸಿದ್ದರು. ಪೂಜಾ ಭಟ್ಟರು ಮಹಾಪೂಜೆ ಆರಂಭಿಸಿದರು. ವಾದ್ಯಘೋಷಗಳ ಕಿವಿಗಡಚಿಕ್ಕುವ ಶಬ್ದ, ಭಕ್ತವೃಂದದವರ ಭಕ್ತಿಯ ಪರಾಕಾಷ್ಠೆಯ ಜಯಕಾರಗಳಲ್ಲಿ ವಿಷ್ಣು ಆವೇಶದಲ್ಲಿ ಕಣ್ಣು ಕೆಂಪಾದದ್ದಕ್ಕೆ ಕಾರಣಗಳನ್ನು ಹೇಳುತ್ತಿದ್ದರೂ ಲಕ್ಷ್ಮಿಗೆ ಏನೂ ಕೇಳಿಸದೇ ಹೋಯಿತು.

ಇದನ್ನು ಮನಗಂಡ ವಿಷ್ಣು ಮಾತು ನಿಲ್ಲಿಸಿ ಕಣ್ಮುಚ್ಚಿ ಧ್ಯಾನಸ್ಥನಾಗಿ, ಹಾಳಾಗಿ ಹೋಗಿರುವ ಲೋಕವನ್ನು ಸರಿದಾರಿಗೆ ತರಲು ಮಾಡಬೇಕಾದ ಕಾರ್ಯಗಳನ್ನು ಚಿಂತಿಸತೊಡಗಿದ. ಲಕ್ಷ್ಮಿಯ ಕೃಪಾಕಟಾಕ್ಷವಿರುವ ದುಷ್ಟರನ್ನು ಸದೆಬಡಿಯುವ ಕಲ್ಕಿಯಾಗಿ ಮೆರೆಯಲು ತನಗೆ ಬೇಕಾಗಬಹುದಾದ ಅಪಾರ ಶಕ್ತಿ ಸಾಮರ್ಥ್ಯವನ್ನು ಗಳಿಸಿಕೊಳ್ಳುವುದು ಹೇಗೆ ಎಂದು ಗಂಭೀರವಾಗಿ ಲೆಕ್ಕ ಹಾಕತೊಡಗಿದ.

## ಗೋಪೀನಾಥ ರಾವ್

ಊರು ದಕ್ಷಿಣ ಕನ್ನಡ ಜಿಲ್ಲೆಯ ಕಟಪಾಡಿ. ತಂದೆ ಹೆಸರಾಂತ ಯಕ್ಷಗಾನ ಅರ್ಥಧಾರಿ ಹಾಗೂ ಕನ್ನಡ ಅಧ್ಯಾಪಕ ದಿವಂಗತ ಮಟ್ಟಿ ಸುಬ್ಬರಾಯರು. ಅಮ್ಮ ಮುತ್ತಮ್ಮ. ವಿದ್ಯಾಭ್ಯಾಸ ಕಟಪಾಡಿ, ಸುರತ್ಕಲ್ ಮತ್ತು ಮಂಗಳೂರಲ್ಲಿ. ವೃತ್ತಿಯಲ್ಲಿ ಚಾರ್ಟರ್ಡ್ ಅಕೌಂಟೆಂಟ್. ಪ್ರಸ್ತುತ ದುಬೈಯಲ್ಲಿ ಉದ್ಯೋಗ. 'ಸಾರ್ವಭೌಮ', 'ಪಾಂ ಪಾಂ ರೈಲು', 'ರಂಗವಲ್ಲಿ ಮನೆ ಎಲ್ಲಿ?' ಎಂಬ ಕಥಾ ಸಂಕಲನಗಳನ್ನು ಪ್ರಕಟಿಸಿದ್ದಾರೆ.